# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶಿಕ್ಷಣ ಇಲಾಖಾ ವತಿಯಿಂದ ನಡೆಸಲ್ಪಡುತ್ತಿರುವ ವಸತಿಶಾಲಾ ಶಿಕ್ಷಣ ಸಂಸ್ಥೆಗಳನ್ನು ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ವಹಿಸಿಕೊಡುವ ಬಗ್ಗೆ - ಆದೇಶ

\- - -

<u>ಓದಲಾಗಿದೆ</u> :

1) ಸರ್ಕಾರಿ ಆದೇಶ ಸಂಖ್ಯೆ: ಇಡಿ 110 ಯೋಯೋಕಾ 2002. ದಿನಾಂಕ: 6/5/2003.
2) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ರವರ ಪತ್ರ ಸಂಖ್ಯೆ:ಕವಶಿಸಸ/ಸಿಆರ್/11/2003-04, ದಿನಾಂಕ: 24/6/2003.

<u>ಪ್ರಸ್ತಾವನೆ</u> :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಶಿಕ್ಷಣ ಇಲಾಖೆಯಿಂದ ವಿವಿಧ ಜಿಲ್ಲೆಗಳಲ್ಲಿ ನಡೆಯುತ್ತಿರುವ 32 ವಸತಿ ಶಾಲೆಗಳು ಮತ್ತು 4 ಅನುದಾನಿತ ವಸತಿ ಶಾಲೆಗಳನ್ನು ಹಾಲಿ ಇರುವಂತೆ, ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಗೊಳಪಡುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರಿಗೆ ರಾಜ್ಯವಲಯ ಮತ್ತು ಜಿಲ್ಲಾವಲಯ ಆಯವ್ಯಯವನ್ನು ಸಂಬಂಧಿಸಿದ ಲೆಕ್ಕಶೀರ್ಷಿಕೆಯೊಂದಿಗೆ ವರ್ಗಾಯಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ರವರ ಪ್ರಸ್ತಾವನೆಯಲ್ಲಿ ಈಗಾಗಲೇ ವರ್ಗಾಯಿಸಲ್ಪಟ್ಟ 32 ವಸತಿ ಶಾಲೆಗಳ ಸ್ಥಿತಿಗತಿಗಳ ಬಗ್ಗೆ ಅರಿಯಲು ಎಲ್ಲಾ ಶಾಲೆಗಳನ್ನು ತಪಾಸಣೆ ಮಾಡಲು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಪ್ರತಿ ವಿದ್ಯಾರ್ಥಿಗೆ ತಗಲುತ್ತಿರುವ ಖರ್ಚು, ವಿದ್ಯಾರ್ಥಿಗಳ ಪ್ರವೇಶದ ವಿಧಾನ, ಕಳೆದ ಮೂರು ವರ್ಷಗಳ ಎಸ್‌ಎಸ್‌ಎಲ್‌ಸಿ ಫಲಿತಾಂಶ, ಶಿಕಣ ಮತ್ತು ಶಿಕ್ಷಕೇತರ ಸಿಬ್ಬಂದಿ, ಕಳೆದ ಮೂರು ವರ್ಷಗಳಿಂದ ಮಾಡಿದ ಖರ್ಚಿನ ವಿವರ, ಇತರ ಸವಲತ್ತುಗಳಾದ ಟಿ.ವಿ, ಸೋಲಾರ್ ಗ್ಯಾಸ್, ಹಾಸಿಗೆ ಹೊದಿಕೆ ನೀಡಿರುವ ಬಗ್ಗೆ ಆಯವ್ಯಯದಲ್ಲಿ ಒದಗಿಸಿಕೊಂಡಿರುವ ಅನುದಾನ, ಕಟ್ಟಡ ನಿರ್ಮಾಣಕ್ಕಾಗಿ ಜಮೀನು ಪಡೆದಿರುವ ವಿವರ ಇತ್ಯಾದಿ ಅಂಶಗಳನ್ನು ನೀಡುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯವರನ್ನು ಕೋರಲಾಗಿದ್ದು, ಇದುವರೆಗೂ ಅವರಿಂದ ಮಾಹಿತಿ ಬಾರದ ಕಾರಣ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವೇ ಪ್ರತಿ ಶಾಲೆಗಳಿಗೆ ಭೇಟಿ ನೀಡಿ ಮಾಹಿತಿಗಳನ್ನು ಸಂಗ್ರಹಿಸಲು ತಪಾಸಣೆ ಕ್ರಮ ಕೈಗೊಳ್ಳುತ್ತಿರುವುದಾಗಿ ತಿಳಿಸಿ, ಸದರಿ ಶಾಲೆಗಳ ನಿರ್ವಹಣೆಗಾಗಿ ಒದಗಿಸಿಕೊಂಡಿರುವ ಅನುದಾನವು ಸಾಕಾಗುವುದಿಲ್ಲವೆಂದು, ಶಿಕ್ಷಣ ಇಲಾಖೆಯು ನಿರ್ವಹಿಸುತ್ತದ್ದ ಈ ಶಾಲೆಗಳಿಗೆ ಪ್ರತಿಯೊಂದು ವಿದ್ಯಾರ್ಥಿಗೆ ತಿಂಗಳಿಗೆ ರೂ.250.00 ಗಳಂತೆ ಖರ್ಚು ಮಾಡಲಾಗುತ್ತಿದ್ದು, ಪ್ರಸ್ತುತ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ಒಂದು ವಿದ್ಯಾರ್ಥಿಗೆ ತಿಂಗಳಿಗೆ ರೂ.500.00 ಗಳಂತೆ ಖರ್ಚು ಮಾಡುತ್ತಿರುವುದರಿಂದ ಸಮವಸ್ತ್ರ, ಪಾದರಕ್ಷೆ, ವೈದ್ಯಕೀಯ ವೆಚ್ಚ ಇವುಗಳಿಗೆ ತಿಂಗಳಿಗೆ ರೂ.2000.00 ಗಳು ಮಾತ್ರ ಶಿಕ್ಷಣ ಇಲಾಖೆಯು ನೀಡುತ್ತಿದ್ದು, ಹಾಲಿ ವರ್ಗಾವಣೆಗೊಂಡ ವಸತಿ ಶಾಲೆಗಳಿಗೆ ಸಂಸ್ಥೆಯ ವತಿಯಿಂದ ರೂ.10,000/- ಗಳನ್ನು ನೀಡಬೇಕಾಗುತ್ತಿದೆ. ಆದ್ದರಿಂದ ವಸತಿ ಶಾಲೆಗಳ ನಿರ್ವಹಣೆಯಲ್ಲಿನ ಊಟದ ವೆಚ್ಚ ಮತ್ತಿತರೇ ವೆಚ್ಚಗಳಲ್ಲಿ ಶಿಕ್ಷಣ ಇಲಾಖೆಯ ವೆಚ್ಚಕ್ಕಿಂತ ಹೆಚ್ಚು ವ್ಯತ್ಯಾಸವಿರುವುದರಿಂದ, ಈ ವ್ಯತ್ಯಾಸದ ಹೆಚ್ಚುವರಿ ಅನುದಾನವನ್ನು ಸಂಸ್ಥೆಯೇ ಭರಿಸಬೇಕಾಗಿರುತ್ತದೆ. ಅದರಂತೆ, ನಿರ್ವಹಣೆಗಾಗಿ ಹೆಚ್ಚಿನ ಅನುದಾನದ ಅವಶ್ಯಕತೆ ಇರುವುದೆಂದು ತಿಳಿಸುತ್ತಾ, 4 ಶಾಲೆಗಳು ಜಿಲ್ಲಾ ವಲಯದಲ್ಲಿದ್ದು, ಜಿಲ್ಲಾ ಪಂಚಾಯತ್ ಅಧೀನದಲ್ಲಿರುತ್ತದೆ. 2 ಶಾಲೆಗಳ ಹಣಕಾಸು ಸಂಸ್ಥೆಯ ಅಧೀನಕ್ಕೆ ಬರುವುದಿಲ್ಲವೆಂದು ತಿಳಿಸುತ್ತಾ, 4 ಅನುದಾನಿತ ಶಾಲೆಗಳನ್ನು ಆಯಾ ಖಾಸಗಿ ಆಡಳಿತ ಮಂಡಳಿಯು ನಿರ್ವಹಿಸುತ್ತಿದ್ದು, ಅನುದಾನ ಮಾತ್ರ ಸರ್ಕಾರ ಬಿಡುಗಡೆ ಮಾಡಲಾಗುತ್ತಿದೆ. ಹಾಗೂ 4 ಅನುದಾನಿತ ಶಾಲೆಗಳ ಪೈಕಿ 1 ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಕಿತ್ತೂರು, ಬೆಳಗಾಂ ಜಿಲ್ಲೆ ಈ ಸಂಸ್ಥೆಯವರು ಶಾಲೆಯನ್ನು ಸೈನಿಕ ಶಾಲೆ ಮಾದರಿಯಲ್ಲಿ ನಡೆಸಲು ತೀರ್ಮಾನಿಸಿದ್ದು, ಈ ವಸತಿ ಶಾಲೆಯನ್ನು ಬಿಟ್ಟು ವಹಿಸಿಕೊಳ್ಳಬಹುದಾಗಿ ತಿಳಿಸಿ 36 ಶಾಲೆಗಳಲ್ಲಿ ಈ ಕೆಳಕಂಡ 3 ಶಾಲೆಗಳನ್ನು ಹೊರತುಪಡಿಸಿ ಅಂದರೆ:

- 2 -

Scanned with CamScanner

1) ಮಾಯಕೊಂಡ ಪರಿಶಿಷ್ಟ ಜಾತಿ:ವರ್ಗಗಳ ಬಾಲಕಿಯರ ವಸತಿಶಾಲೆ, ದಾವಣಗೆರೆ
2) ಬಾಗಲಕೋಟೆ ಪರಿಶಿಷ್ಟ ಜಾತಿ:ವರ್ಗಗಳ ಬಾಲಕಿಯರ ವಸತಿಶಾಲೆ, ಬಿಜಾಪುರ
3) ಕಿತ್ತೂರು ರಾಣಿ ಚೆನ್ನಮ್ಮ ವಸತಿಶಾಲೆ, ಕಿತ್ತೂರು, ಬೆಳಗಾಂ.

ಉಳಿದ, 33 ವಸತಿ ಶಾಲೆಗಳನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ವಹಿಸುವಂತೆ ಕೋರಿದ್ದಾರೆ.

ಮೇಲಿನ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಶಿಕ್ಷಣ ಇಲಾಖಾ ವತಿಯಿಂದ ವರ್ಗಾಯಿಸಲ್ಪಟ್ಟ ವಸತಿ ಶಾಲೆಗಳ ನಿರ್ವಹಣೆಯನ್ನು ಸಮಾಜ ಕಲ್ಯಾಣ ಇಲಾಖೆಯ ಅಧೀನಕ್ಕೊಳಪಡುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ವಹಿಸಿ, ಸಂಘವು ಶಾಲೆಗಳಿಗೆ ಒದಗಿಸಬೇಕಾದ ಮೂಲಭೂತ ಸೌಕರ್ಯಗಳ ನಿಟ್ಟಿನಲ್ಲಿ ಹಾಗೂ ಹಾಲಿ ಜಾರಿಯಲ್ಲಿರುವ ದರಗಳ ಆಧಾರದ ಮೇಲೆ ಪ್ರತಿ ವಿದ್ಯಾರ್ಥಿಗಳಿಗೆ ತಗಲುವ ವೆಚ್ಚವನ್ನು ಗಮನದಲ್ಲಿಟ್ಟುಕೊಂಡು 36 ವಸತಿ ಶಾಲೆಗಳ ಪೈಕಿ ಈ ಕೆಳಕಂಡ 27 ವಸತಿ ಶಾಲೆಗಳನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ವಹಿಸಲು ಸರ್ಕಾರವು ತೀರ್ಮಾನಿಸಿ ಈ ಕೆಳಗಿನಂತೆ ಆದೇಶ ಹೊರಡಿಸಿದೆ :

1) 20 ಮೊರಾರ್ಜಿದೇಸಾಯಿ ವಸತಿ ಶಾಲೆಗಳು (ತರಗತಿ 6 ರಿಂದ 10)
2) ಕವಿರನ್ನ ವಸತಿ ಶಾಲೆ, ಮುಧೋಳ, ಬಾಗಲಕೋಟೆ ಜಿಲ್ಲೆ (ತರಗತಿ 6 ರಿಂದ 10)
3) ಸಂಗೊಳ್ಳಿರಾಯಣ್ಣ ವಸತಿ ಶಾಲೆ, ನಂದಗಡ, ಬೆಳಗಾಂ ಜಿಲ್ಲೆ (ತರಗತಿ 6 ರಿಂದ 10)
4) ಗಾಂಧಿತತ್ವ ಆಧಾರಿತ ವಸತಿಶಾಲೆ, ಚೆಳ್ಳಗುರ್ಕಿ, ಬಳ್ಳಾರಿ ಜಿಲ್ಲೆ (ತರಗತಿ 6 ರಿಂದ 10)
5) 4 ಅನುದಾನಿತ ಶಾಲೆಗಳು (ತರಗತಿ 6 ರಿಂದ 10)

<u>ಸರ್ಕಾರದ ಆದೇಶ ಸಂಖ್ಯೆ: ಸಕಇ 53 ಮೊದೇಶಾ 2002, ಬೆಂಗಳೂರು, ದಿನಾಂಕ: 17/7/2003</u>

ಶಿಕ್ಷಣ ಇಲಾಖಾ ವತಿಯಿಂದ ವರ್ಗಾಯಿಸಲ್ಪಟ್ಟ, ಈ ಕೆಳಕಂಡ ವಸತಿ ಶಾಲಾ ಶಿಕ್ಷಣ ಸಂಸ್ಥೆಗಳನ್ನು ಸಮಾಜ ಕಲ್ಯಾಣ ಇಲಾಖೆಯ ಅಧೀನಕ್ಕೊಳಪಡುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ಈ ಕೂಡಲೇ ಜಾರಿಗೆ ಬರುವಂತೆ ರಾಜ್ಯವಲಯ ಹಾಗೂ ಜಿಲ್ಲಾವಲಯ ಲೆಕ್ಕಶೀರ್ಷಿಕೆ ಮತ್ತು ನಿಗಧಿಗೊಳಿಸಿರುವ ಆಯವ್ಯಯದೊಂದಿಗೆ ನಿರ್ವಹಿಸಲು ಆದೇಶಿಸಿದೆ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಇವರ ಪ್ರಸ್ತಾವನೆಯನ್ವಾಧರಿಸಿ ಈ ವಸತಿಶಾಲೆಗಳಿಗೆ ಬೇಡಿಕೆಯನುಸಾರ ಅನುದಾನವನ್ನು ಬಿಡುಗಡೆಗೊಳಿಸಲಾಗುವುದು :

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ವಸತಿ ಶಾಲೆಗಳು | ರಾಜ್ಯವಲಯ ಲೆಕ್ಕಶೀರ್ಷಿಕೆ | ನಿಗಧಿಪಡಿಸಿರುವ ಆಯವ್ಯಯ | | |
|---|---|---|---|---|---|
| | | | ಯೋಜನೆ | ಯೋಜನೇತರ | ಒಟ್ಟು |
| 1 | 20 ಮೊರಾರ್ಜಿದೇಸಾಯಿ ವಸತಿಶಾಲೆಗಳು (ತರಗತಿ 6 ರಿಂದ 10) | 2202–02–800–9–03 | 130.00 | 288.20 | 418.20 |
| 2 | ಕವಿರನ್ನ ವಸತಿ ಶಾಲೆ, ಮುಧೋಳ, ಬಾಗಲಕೋಟೆ ಜಿಲ್ಲೆ (ತರಗತಿ 6 ರಿಂದ 10) | 2202–02–800–9–01 | 14.60 | 30.29 | 44.89 |
| 3 | ಸಂಗೊಳ್ಳಿರಾಯಣ್ಣ ವಸತಿ ಶಾಲೆ, ನಂದಗಡ, ಬೆಳಗಾಂ ಜಿಲ್ಲೆ (ತರಗತಿ 6 ರಿಂದ 10) | 2202–02–800–9–01 | 35.40 | -- | 35.40 |



Scanned with CamScanner

| | | | | | |
|---|---|---|---|---|---|
| 4 | ಗಾಂಧಿತತ್ವ ಆಧಾರಿತ ವಸತಿಶಾಲೆ, ಚೆಳ್ಳಗುರ್ಕಿ, ಬಳ್ಳಾರಿ ಜಿಲ್ಲೆ (ತರಗತಿ 6 ರಿಂದ 10) | 2202-02-109-0-74 (ಜಿಲ್ಲಾವಲಯ) | -- | 9.64 | 9.64 |
| 5 | <u>ಅನುದಾನಿತ ವಸತಿಶಾಲೆಗಳು</u><br>1) ಡಾ:ಅಂಬೇಡ್ಕರ್ ವಸತಿಶಾಲೆ, ಶಿವಮೊಗ್ಗ | 2202-02-110-3-05 | -- | 32.00 | 32.00 |
| | 2) ಪ್ರತಿಭಾನ್ವಿತ ವಿದ್ಯಾರ್ಥಿನಿಯರಿಗಾಗಿ ಕಿತ್ತೂರುರಾಣಿ ಚೆನ್ನಮ್ಮ ವಸತಿ ಶಾಲೆ, ಕಿತ್ತೂರು | 2202-02-110-3-05 | -- | 64.00 | 64.00 |
| | 3) ಬುದ್ಧರಖಿತ ವಸತಿಶಾಲೆ, ಧಾರವಾಡ | 2202-02-110-3-06 | -- | 23.23 | 23.23 |
| | 4) ಗಾಂಧಿಗ್ರಾಮೀಣ ಗುರುಕುಲ ವಸತಿಶಾಲೆ, ಹೊಸರಿತ್ತಿ | 2202-02-110-3-56 | -- | 31.96 | 31.96 |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ. ಕಮಲಮ್ಮ) 17/7
ಸರ್ಕಾರದ ಅಧೀನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

1) ಮಹಾಲೇಖಪಾಲರು, ಕರ್ನಾಟಕ (ಆಡಿಟ್-1 ಮತ್ತು 2), ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ /ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು
3) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
4) ಆಯುಕ್ತರು, ಸಮಾಜ ಕಲ್ಯಾಣ/ಹಿಂದುಳಿದ ವರ್ಗಗಳ ಇಲಾಖೆ, ಬೆಂಗಳೂರು
5) ನಿರ್ದೇಶಕರು, (ಪ್ರೌಢಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
6) ನಿರ್ದೇಶಕರು, (ಜನಶಕ್ತಿ ಮತ್ತು ಉದ್ಯೋಗ ವಿಭಾಗ) ಯೋಜನಾ ಇಲಾಖೆ, ಬೆಂಗಳೂರು
7) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
8) ಸರ್ಕಾರದ ಉಪ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನಸೌಧ, ಬೆಂಗಳೂರು
9) ವಿಶೇಷ ಅಧಿಕಾರಿಗಳು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ (ಯೋಜನೆ), ಶಿಕ್ಷಣ ಇಲಾಖೆ, ಬೆಂಗಳೂರು
10) ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಖೆ (ವೆಚ್ಚ-3 /ವೆಚ್ಚ-4), ವಿಧಾನಸೌಧ, ಬೆಂಗಳೂರು
11) ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು
12) ಎಲ್ಲಾ ಜಿಲ್ಲೆಂಯ ಜಿಲ್ಲಾಧಿಕಾರಿಗಳು
13) ಎಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
14) ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ
15) ಎಲ್ಲಾ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು
16) ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತರ ವರ್ಗದ ಅಧಿಕಾರಿಗಳು
17) ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು
18) ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು

Scanned with CamScanner

19) ಪ್ರಾಂಶುಪಾಲರು, 20 ಮೊರಾರ್ಜಿದೇಸಾಯಿ ವಸತಿಶಾಲೆಗಳು – ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರ ಮುಖಾಂತರ
20) ಪ್ರಾಂಶುಪಾಲರು, ಕವಿರನ್ನ ವಸತಿ ಶಾಲೆ, ಮುಧೋಳ, ಬಾಗಲಕೋಟೆ ಜಿಲ್ಲೆ
21) ಪ್ರಾಂಶುಪಾಲರು, ಸಂಗೊಳ್ಳಿರಾಯಣ್ಣ ವಸತಿ ಶಾಲೆ, ನಂದಗಡ, ಬೆಳಗಾಂ ಜಿಲ್ಲೆ
22) ಪ್ರಾಂಶುಪಾಲರು, ಗಾಂಧಿತತ್ವ ಆಧಾರಿತ ವಸತಿಶಾಲೆ, ಚೆಳ್ಳಗುರ್ಕಿ, ಬಳ್ಳಾರಿ ಜಿಲ್ಲೆ
23) ಪ್ರಾಂಶುಪಾಲರು, ಡಾ:ಅಂಬೇಡ್ಕರ್ ವಸತಿಶಾಲೆ, ಶಿವಮೊಗ್ಗ
24) ಪ್ರಾಂಶುಪಾಲರು, ಪ್ರತಿಭಾನ್ವಿತ ವಿದ್ಯಾರ್ಥಿಗಾಗಿ ಕಿತ್ತೂರುರಾಣಿ ಚೆನ್ನಮ್ಮ ವಸತಿ ಶಾಲೆ, ಕಿತ್ತೂರು, ಬೆಳಗಾಂ ಜಿಲ್ಲೆ
25) ಪ್ರಾಂಶುಪಾಲರು, ಬುದ್ಧರಖಿತ ವಸತಿಶಾಲೆ, ಧಾರವಾಡ
26) ಪ್ರಾಂಶುಪಾಲರು, ಗಾಂಧಿಗ್ರಾಮೀಣ ಗುರುಕುಲ ವಸತಿಶಾಲೆ, ಹೊಸರಿತ್ತಿ, ಹಾವೇರಿ ಜಿಲ್ಲೆ
27) ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು
28) ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
29) ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
30) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು

Scanned with CamScanner